**ಎಸ್.ಸಿ. ನಂ. 22/2021**

**ದೋ.ಸಾ. :39 ಫಿರ್ಯಾ.ಸಾ. : 33**

ಸಾಕ್ಷಿಯ ಹೆಸರು : ಶ್ರೀಧರ ಎಸ್.ಆರ್.

**ದಿನಾಂಕಃ 18-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

14. ಅದೇ ದಿನ ಚಾಸಾ-34 ರವರು ಆರೋಪಿಯಿಂದ ಕೃತ್ಯಕ್ಕೆ ಬಳಸಿದ ಚಾಕು ಹಾಗೂ ಆರೋಪಿಯ ಲುಂಗಿಯನ್ನು ಜಪ್ತುಪಡಿಸಿಕೊಳ್ಳುವ ಪಂಚನಾಮೆಯ ಕಾಲಕ್ಕೆ, ಚಾಸಾ-35 ರವರು ಮೃತನ ಶವದ ಮೇಲಿದ್ದ ಬಟ್ಟೆಗಳನ್ನು ಹಾಜರುಪಡಿಸಿ, ಜಪ್ತುಪಡಿಸಿಕೊಳ್ಳುವ ಕಾಲಕ್ಕೆ, ಚಾಸಾ-15 ರವರು ತೋರಿಸಿದ ಸ್ಥಳದ ಪಂಚನಾಮೆಯ ಕಾಲಕ್ಕೆ ಫೋಟೊ ತೆಗೆದ ಬಗ್ಗೆ ಚಾಸಾ-34 ರವರು ಕಲಂ. 65-ಬಿ ಪ್ರಮಾಣ ಪತ್ರವನ್ನು ಮೂರು ಡಿ.ವಿ.ಡಿ. ಹಾಗೂ ಫೋಟೊಗಳೊಂದಿಗೆ ನೀಡಿದ್ದು, ಸದರಿ 65-ಬಿ ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ-59 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-59(ಬಿ) ಎಂದು ಗುರುತಿಸಲಾಯಿತು. ಡಿ.ವಿ.ಡಿ. ಗಳನ್ನು ಈಗಾಗಲೇ ನಿಪಿ-60, 61 ಮತ್ತು 62 ಎಂದು ಗುರುತಿಸಲಾಗಿರುತ್ತದೆ. ಅದೇ ದಿನ ಚಾಸಾ-35 ರವರು ಚಾಸಾ-10 ರವರು ಹಾಜರುಪಡಿಸಿದ ಮೊಬೈಲ್ ಜಪ್ತುಪಂಚನಾಮೆಯ ಸಮಯದಲ್ಲಿ ಸದರಿ ಮೊಬೈಲಿನಲ್ಲಿದ್ದ ಘಟನೆಗೆ ಸಂಬಂಧಿಸಿದ ವೀಡಿಯೋ ಕ್ಲಿಪ್ ಹಾಗೂ ಅದರಿಂದ ತೆಗೆದ ಸ್ಕ್ರೀನ್ ಶಾಟ್ ಗಳನ್ನು ಸಿ.ಡಿ. ಗೆ ಹಾಕಿ, ಸ್ಕ್ರೀನ್ ಶಾಟ್ ಗಳನ್ನು ಪ್ರಿಂಟ್ ತೆಗೆದ ಬಗ್ಗೆ ಕಲಂ.65-ಬಿ ಪ್ರಮಾಣ ಪತ್ರವನ್ನು ಡಿ.ವಿ.ಡಿ. ಯೊಂದಿಗೆ ನೀಡಿದ್ದು, 65-ಬಿ ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ-98 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-98(ಬಿ) ಎಂದು ಗುರುತಿಸಲಾಯಿತು. ಡಿ.ವಿ.ಡಿ. ಯನ್ನು ಈಗಾಗಲೇ ನಿಪಿ-65 ಎಂದು ಗುರುತಿಸಲಾಯಿತು.

15. ದಿ.06-05-2021 ರಂದು ಸಾಕ್ಷಿದಾರರಾದ ಚಾಸಾ-20 ರಿಂದ 26 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಘಟನಾ ಸ್ಥಳದಲ್ಲಿ ಜಪ್ತುಪಡಿಸಿಕೊಂಡ ವಸ್ತುಗಳನ್ನು ಹಾಗೂ ಆರೋಪಿಯಿಂದ ಜಪ್ತುಪಡಿಸಿಕೊಂಡ ಕೃತ್ಯಕ್ಕೆ ಉಪಯೋಗಿಸಿದ ಚಾಕುವನ್ನು ಹಾಗೂ ಆರೋಪಿಯು ಕೃತ್ಯದ ವೇಳೆಯಲ್ಲಿ ಧರಿಸಿದ್ದ ಲುಂಗಿ ಹಾಗೂ ಶರ್ಟನ್ನು ಹಾಗೂ ಮೃತ ಅಬುತಾಲೀಬ್ ರವರ ಮೈಮೇಲಿದ್ದ ಬಟ್ಟೆಗಳನ್ನು ಹಾಗೂ ವೈದ್ಯಾಧಿಕಾರಿಗಳು ಮೃತನ

ಮರಣೋತ್ತರ ಪರೀಕ್ಷಾ ಕಾಲಕ್ಕೆ ಸಂಗ್ರಹಿಸಿದ ವಿಸೇರಾ ವಸ್ತುಗಳನ್ನು ತಜ್ಞರ ಪರೀಕ್ಷೆಗಾಗಿ ಆರ್.ಎಫ್.ಎಸ್.ಎಲ್., ಮಂಗಳೂರು ರವರಿಗೆ ಕಳುಹಿಸಿಕೊಡುವ ಕುರಿತು, ಮಾನ್ಯ ನ್ಯಾಯಾಲಯದಿಂದ ಅನುಮತಿ ಪಡೆದುಕೊಂಡು, ಚಾಸಾ-31 ರವರ ಮೂಲಕ ದಿ.11-05-2021 ರಂದು ಡಿ.ಎಸ್.ಪಿ. ಕಚೇರಿಯ ಮುಖಾಂತರ ಮಾದರಿ ಮೊಹರು ಹಾಗೂ ಕೋರಿಕೆ ಪತ್ರ ಸೇರಿ 9 ಪುಟಗಳಲ್ಲಿ ಕಳುಹಿಸಿಕೊಟ್ಟಿರುತ್ತೇನೆ. ಅದರಂತೆ ಚಾಸಾ-31 ರವರು ಆರ್.ಎಫ್.ಎಸ್.ಎಲ್., ಮಂಗಳೂರು ರವರಿಗೆ ಸದರಿ ವಸ್ತುಗಳನ್ನು ತಲುಪಿಸಿ, ಸ್ವೀಕೃತಿಯನ್ನು ಪಡೆದು ನಂತರ ದಿ.15-05-2021 ರಂದು ಸದರಿ ಸ್ವೀಕೃತಿಯನ್ನು ನನ್ನ ಮುಂದೆ ಹಾಜರುಪಡಿಸಿರುತ್ತಾರೆ ಹಾಗೂ ಈ ಬಗ್ಗೆ ಚಾಸಾ-31 ರವರು ಹೇಳಿಕೆಯನ್ನು ನೀಡಿರುತ್ತಾರೆ. ಆರ್.ಎಫ್.ಎಸ್.ಎಲ್., ಮಂಗಳೂರು ರವರಿಗೆ ನೀಡಿದ ಕೋರಿಕೆ ಪತ್ರವನ್ನು ಹಾಗೂ ಮಾದರಿ ಮೊಹರನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-118 ಎಂದು, ಸಾಕ್ಷಿಯ ಸಹಿಯನ್ನು ನಿಪಿ-118(ಎ), 118(ಬಿ), 118(ಸಿ) ಮತ್ತು 118(ಡಿ) ಎಂದು ಗುರುತಿಸಲಾಯಿತು. ಚಾಸಾ-31 ರವರು ಹಾಜರುಪಡಿಸಿದ ಸ್ವೀಕೃತಿ ಪತ್ರವನ್ನು ಈಗಾಗಲೇ ನಿಪಿ-54 ಎಂದು ಗುರುತಿಸಲಾಗಿರುತ್ತದೆ.

16. ಅದೇ ದಿನ ಮೃತನ ಮರಣೋತ್ತರ ಪರೀಕ್ಷಾ ಕಾಲಕ್ಕೆ ವೈದ್ಯಾಧಿಕಾರಿಗಳು ಸಂಗ್ರಹಿಸಿ ನೀಡಿದ್ದ ಮೃತನ ಹೃದಯದ ಭಾಗವನ್ನು ತಜ್ಞರ ಪರೀಕ್ಷೆಗಾಗಿ ಕ್ರಿಮ್ಸ್, ಕಾರವಾರದ ಪ್ಯಾಥೊಲೋಜಿ ವಿಭಾಗಕ್ಕೆ ಚಾಸಾ-32 ರವರ ಮೂಲಕ ಡಿ.ಎಸ್.ಪಿ. ಕಚೇರಿಯ ಮುಖಾಂತರ 6 ಪುಟಗಳ ಕೋರಿಕೆ ಪತ್ರದೊಂದಿಗೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ಕೋರಿಕೆ ಪತ್ರವನ್ನು ಈಗಾಗಲೇ ನಿಪಿ-76 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-76(ಎ), 76(ಬಿ), 76(ಸಿ) ಮತ್ತು 76(ಡಿ) ಎಂದು ಗುರುತಿಸಲಾಯಿತು. ಸದರಿ ವಸ್ತುವನ್ನು ಕ್ರಿಮ್ಸ್ ಕಾರವಾರಕ್ಕೆ ತಲುಪಿಸಿದ ಬಗ್ಗೆ ಚಾಸಾ-32 ರವರು ಅದೇ ಸ್ವೀಕೃತಿಯನ್ನು ತಂದು ನನ್ನ ಮುಂದೆ ಹಾಜರುಪಡಿಸಿರುತ್ತಾರೆ ಹಾಗೂ ಈ ಬಗ್ಗೆ ಹೇಳಿಕೆಯನ್ನು ನೀಡಿರುತ್ತಾರೆ. ದಿ.15-05-2021 ರಂದು ಚಾಸಾ-40 ರವರಿಗೆ ಪತ್ರ ಬರೆದು, ಘಟನಾ ಸ್ಥಳ ಹಾಗೂ ಆರೋಪಿಯು ಕೃತ್ಯಕ್ಕೆ ಉಪಯೋಗಿಸಿದ ಚಾಕು ಮತ್ತು ಕೃತ್ಯದ ವೇಳೆಯಲ್ಲಿ ಧರಿಸಿದ ಲುಂಗಿಯನ್ನು ಬಚ್ಚಿಟ್ಟ ಸ್ಥಳದ ಆರ್.ಟಿ.ಸಿ. ಯನ್ನು ಪೂರೈಸುವಂತೆ ಕೋರಿಕೊಂಡಿರುತ್ತೇನೆ. ಸದರಿ ಕೋರಿಕೆ ಪತ್ರವನ್ನು ಈಗಾಗಲೇ ನಿಪಿ-92 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-92(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-41 ರವರಿಗೆ ಪತ್ರ ಬರೆದು, ಘಟನಾ ಸ್ಥಳ ಹಾಗೂ ಆರೋಪಿಯು ಕೃತ್ಯಕ್ಕೆ ಉಪಯೋಗಿಸಿದ ಚಾಕು ಮತ್ತು ಕೃತ್ಯದ ವೇಳೆಯಲ್ಲಿ ಧರಿಸಿದ ಲುಂಗಿಯನ್ನು ಬಚ್ಚಿಟ್ಟ ಸ್ಥಳದ ನಕಾಶೆಯನ್ನು

ತಯಾರಿಸಿಕೊಡಲು ಕೋರಿಕೊಂಡಿರುತ್ತೇನೆ. ಸದರಿ ಕೋರಿಕೆ ಪತ್ರವನ್ನು ಈಗಾಗಲೇ ನಿಪಿ–72 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–72(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ–22 ರವರಿಗೆ ಪತ್ರ ಬರೆದು, ಆರೋಪಿತನ ಮನೆ, ಚಾಸಾ–14 ರವರ ಮನೆ, ಮೃತನ ಮನೆಗಳ ಉತಾರ ಹಾಗೂ ಘಟನಾ ಸ್ಥಳ ಮತ್ತು ಆರೋಪಿಯು ಕೃತ್ಯದ ಸಮಯದಲ್ಲಿ ಉಪಯೋಗಿಸಿದ ಚಾಕು ಹಾಗೂ ಕೃತ್ಯದ ವೇಳೆಯಲ್ಲಿ ಧರಿಸಿದ ಲುಂಗಿಯನ್ನು ಬಚ್ಚಿಟ್ಟ ಸ್ಥಳದ ಸರ್ವೆ ನಂಬರುಗಳ ಮಾಹಿತಿಯನ್ನು ಪೂರೈಸುವಂತೆ ಕೋರಿಕೊಂಡಿರುತ್ತೇನೆ. ಸದರಿ ಕೋರಿಕೆ ಪತ್ರವನ್ನು ಈಗಾಗಲೇ ನಿಪಿ–87 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–87(ಬಿ) ಎಂದು ಗುರುತಿಸಲಾಯಿತು.

17. ದಿ.04–06–2021 ರಂದು ಚಾಸಾ–35 ರವರು ನನ್ನ ಸೂಚನೆಯ ಮೇರೆಗೆ ಆರೋಪಿ ಹಾಗೂ ಚಾಸಾ–11 ಮತ್ತು 12 ರವರ ಭಾವಚಿತ್ರಗಳನ್ನು ಠಾಣೆಯ ಕ್ಯಾಮೆರಾದಿಂದ ತೆಗೆದು, ಪ್ರಿಂಟ್ ಮಾಡಿ, ಅವುಗಳನ್ನು ನನ್ನ ಮುಂದೆ ಹಾಜರುಪಡಿಸಿದ್ದು, ಸದರಿ ಫೋಟೊಗಳನ್ನು ಜಪ್ತುಪಡಿಸಿಕೊಳ್ಳುವ ಸಲುವಾಗಿ ಚಾಸಾ–5 ಮತ್ತು 9 ರವರಿಗೆ ಪಂಚರಾಗಿ ಬರುವಂತೆ ನೋಟಿಸ್ ಜಾರಿ ಮಾಡಿ, ಅವರ ಸಮಕ್ಷಮ ಆರೋಪಿಯ ಎರಡು ಭಾವಚಿತ್ರಗಳನ್ನು ಹಾಗೂ ಚಾಸಾ–11 ಮತ್ತು 12 ರವರ ತಲಾ ಮೂರು ಭಾವಚಿತ್ರಗಳನ್ನು ಬಿಳಿ ಹಾಳೆಯ ಮೇಲೆ ಅಂಟಿಸಿ, ಅದಕ್ಕೆ ನಾನು, ಚಾಸಾ–35 ರವರು ಮತ್ತು ಪಂಚರು ಸಹಿ ಮಾಡಿ, ಅವುಗಳನ್ನು ಪ್ರತ್ಯೇಕವಾಗಿ ಲಕೋಟೆಗಳಲ್ಲಿ ಹಾಕಿ, ಅರಗಿನ ಸೀಲು ಮಾಡಿ, ಲೇಬಲ್ ಅಂಟಿಸಿ, ಅದರ ಮೇಲೆ ನಾನು, ಚಾಸಾ–35 ರವರು ಮತ್ತು ಪಂಚರು ಸಹಿ ಮಾಡಿ, ಬೆಳಿಗ್ಗೆ 10.00 ಗಂಟೆಯಿಂದ 11.00 ಗಂಟೆಯ ವರೆಗೆ ನಿಪಿ–46 ರಂತೆ ಪಂಚನಾಮೆ ಮಾಡಿ, ನಿಪಿ–47, 48 ಮತ್ತು 49 ರಂತೆ ಫೋಟೊ ತೆಗೆಸಿರುತ್ತೇನೆ. ನಿಪಿ–46 ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–46(ಡಿ) ಎಂದು ಗುರುತಿಸಲಾಯಿತು. ಪಂಚರಿಗೆ ನೀಡಿದ ನೋಟಿಸನ್ನು ಈಗಾಗಲೇ ನಿಪಿ–45 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–45(ಬಿ) ಎಂದು ಗುರುತಿಸಲಾಯಿತು. ಆರೋಪಿಯ ಎರಡು ಭಾವಚಿತ್ರಗಳನ್ನು ಈಗಾಗಲೇ ನಿಪಿ–52 ಎಂದು, ಲಕೋಟೆಯನ್ನು ನಿಪಿ–52/1 ಎಂದು ಗುರುತಿಸಲಾಗಿದ್ದು, ಅವುಗಳ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–52(ಸಿ) ಮತ್ತು 52/1(ಬಿ) ಎಂದು ಗುರುತಿಸಲಾಯಿತು. ಚಾಸಾ–11 ರವರ ಮೂರು ಭಾವಚಿತ್ರಗಳನ್ನು ಈಗಾಗಲೇ ನಿಪಿ–50 ಎಂದು, ಲಕೋಟೆಯನ್ನು ನಿಪಿ–50/1 ಎಂದು ಗುರುತಿಸಲಾಗಿದ್ದು, ಅವುಗಳ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–50(ಸಿ) ಮತ್ತು 50/1(ಬಿ) ಎಂದು ಗುರುತಿಸಲಾಯಿತು. ಚಾಸಾ–12 ರವರ ಮೂರು ಭಾವಚಿತ್ರಗಳನ್ನು ಈಗಾಗಲೇ ನಿಪಿ–51

ಎಂದು, ಲಕೋಟೆಯನ್ನು ನಿಪಿ-51/1 ಎಂದು ಗುರುತಿಸಲಾಗಿದ್ದು, ಅವುಗಳ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-51(ಸಿ) ಮತ್ತು 51/1(ಬಿ) ಎಂದು ಗುರುತಿಸಲಾಯಿತು. ಜಪ್ತುಪಡಿಸಿಕೊಂಡ ಭಾವಚಿತ್ರಗಳನ್ನು ಸ್ವತ್ತು ಪಟ್ಟಿಯಲ್ಲಿ ಅಳವಡಿಸಿ, ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-35 ರವರು ಆರೋಪಿ ಹಾಗೂ ಚಾಸಾ-11 ಮತ್ತು 12 ರವರು ಭಾವಚಿತ್ರಗಳನ್ನು ತೆಗೆದು ಸಿ.ಡಿ.ಯಲ್ಲಿ ಹಾಕಿದ ಬಗ್ಗೆ ಕಲಂ.65-ಬಿ ಪ್ರಮಾಣ ಪತ್ರವನ್ನು ಸಿ.ಡಿ. ಹಾಗೂ ಫೋಟೆಗಳೊಂದಿಗೆ ನೀಡಿದ್ದು, ಅವುಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಿ.ಡಿ.ಯನ್ನು ಈಗಾಗಲೇ ನಿಪಿ-68 ಎಂದು, ಹಾಗೂ 65-ಬಿ ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ-99 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-99(ಬಿ) ಎಂದು ಗುರುತಿಸಲಾಯಿತು.

18. ದಿ.06-06-2021 ರಂದು ಈ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಚಾಸಾ-10 ರವರ ಮೊಬೈಲನ್ನು ಹಾಗೂ ಆರೋಪಿಯ, ಮೃತನ ಮತ್ತು ಚಾಸಾ-11, 12 ರವರ ಭಾವಚಿತ್ರಗಳನ್ನು ತಜ್ಞರ ಪರೀಕ್ಷೆಗಾಗಿ ಕಳುಹಿಸುವ ಕುರಿತು ಮಾನ್ಯ ನ್ಯಾಯಾಲಯದ ಅನುಮತಿ ಪಡೆದು ಚಾಸಾ-33 ರವರ ಮೂಲಕ ಎಫ್.ಎಸ್.ಎಲ್., ಬೆಂಗಳೂರು ರವರಿಗೆ ಡಿ.ಎಸ್.ಪಿ. ಕಚೇರಿಯ ಮುಖಾಂತರ 11 ಪುಟಗಳಲ್ಲಿರುವ ಮಾದರಿ ಮಾಹರು ಮತ್ತು ಕೋರಿಕೆ ಪತ್ರವನ್ನು ಕಳುಹಿಸಿಕೊಟ್ಟಿರುತ್ತೇನೆ. ಸದರಿ ವಸ್ತುಗಳನ್ನು ಎಫ್.ಎಸ್.ಎಲ್., ಬೆಂಗಳೂರು ರವರಿಗೆ ತಲುಪಿಸಿದ ಬಗ್ಗೆ ಚಾಸಾ-33 ರವರು ದಿ.09-06-2021 ರಂದು ಸ್ವೀಕೃತಿಯನ್ನು ನನ್ನ ಮುಂದೆ ಹಾಜರುಪಡಿಸಿರುತ್ತಾರೆ ಹಾಗೂ ಈ ಬಗ್ಗೆ ಚಾಸಾ-33 ರವರು ಹೇಳಿಕೆಯನ್ನು ನೀಡಿರುತ್ತಾರೆ. ಎಫ್.ಎಸ್.ಎಲ್., ಬೆಂಗಳೂರು ರವರಿಗೆ ಕಳುಹಿಸಿದ ಕೋರಿಕೆ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-119 ಎಂದು, ಸಾಕ್ಷಿಯ ಸಹಿಯನ್ನು ನಿಪಿ-119(ಎ), 119(ಬಿ), 119(ಸಿ) ಮತ್ತು 119(ಡಿ) ಎಂದು ಗುರುತಿಸಲಾಯಿತು. ಚಾಸಾ-33 ರವರು ಹಾಜರುಪಡಿಸಿದ ಸ್ವೀಕೃತಿಯನ್ನು ಈಗಾಗಲೇ ನಿಪಿ-91 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-91(ಎ) ಎಂದು ಗುರುತಿಸಲಾಯಿತು. ದಿ.11-06-2021 ರಂದು ಚಾಸಾ-27 ರವರಿಂದ ಮೃತನ ಮರಣೋತ್ತರ ಪರೀಕ್ಷೆಯ ವರದಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ಪಿ.ಎಂ. ವರದಿಯನ್ನು ಈಗಾಗಲೇ ನಿಪಿ-78 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-78(ಬಿ) ಎಂದು ಗುರುತಿಸಲಾಯಿತು. ಆನಂತರ ವೈದ್ಯಾಧಿಕಾರಿಗಳು ಚಾಸಾ-27 ರವರು ಮೃತನ ರಕ್ತದ ಗುಂಪು AB+ ಎಂದು ವರದಿಯನ್ನು ನೀಡಿರುತ್ತಾರೆ. ದಿ.05-07-2021 ರಂದು ಚಾಸಾ-28 ರವರಿಂದ ಆರೋಪಿಯ ಮನೆಯ ಮತ್ತು ಮೃತನ ಮನೆಯ ಉತಾರನ್ನು ಕವಚ ಪತ್ರದೊಂದಿಗೆ ಪಡೆದುಕೊಂಡಿರುತ್ತೇನೆ. ಮೃತನ

ಮನೆಯ ಉತಾರನ್ನು ಈಗಾಗಲೇ ನಿಪಿ-89 ಎಂದು, ಆರೋಪಿಯ ಮನೆಯ ಉತಾರನ್ನು ನಿಪಿ-90 ಎಂದು, ಕವಚ ಪತ್ರವನ್ನು ನಿಪಿ-88 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-88(ಬಿ) ಎಂದು ಗುರುತಿಸಲಾಯಿತು.

19. ದಿ.07-07-2021 ರಂದು ಚಾಸಾ-40 ರವರಿಗೆ ಪುನಃ ಕೋರಿಕೆ ಪತ್ರ ಬರೆದು, ಘಟನಾ ಸ್ಥಳ, ಆರೋಪಿಯು ಕೃತ್ಯಕ್ಕೆ ಉಪಯೋಗಿಸಿದ ಚಾಕು ಮತ್ತು ಕೃತ್ಯದ ಕಾಲಕ್ಕೆ ಧರಿಸಿದ ಲುಂಗಿಯನ್ನು ಬಚ್ಚಿಟ್ಟ ಸ್ಥಳದ ಆರ್.ಟಿ.ಸಿ. ಮತ್ತು ಸರ್ವೆ ನಂಬರನ್ನು ಒದಗಿಸುವಂತೆ ಕೋರಿಕೊಂಡಿರುತ್ತೇನೆ. ಸದರಿ ಕೋರಿಕೆ ಪತ್ರವನ್ನು ಈಗಾಗಲೇ ನಿಪಿ-93 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-93(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-41 ರವರಿಗೆ ಪುನಃ ಕೋರಿಕೆ ಪತ್ರ ಬರೆದು ಘಟನಾ ಸ್ಥಳ, ಆರೋಪಿಯು ಕೃತ್ಯಕ್ಕೆ ಉಪಯೋಗಿಸಿದ ಚಾಕು ಮತ್ತು ಕೃತ್ಯದ ಕಾಲಕ್ಕೆ ಧರಿಸಿದ ಲುಂಗಿಯನ್ನು ಬಚ್ಚಿಟ್ಟ ಸ್ಥಳದ ನಕಾಶೆಯನ್ನು ತಯಾರಿಸಿ ಕೊಡುವಂತೆ ಕೋರಿಕೊಂಡಿರುತ್ತೇನೆ. ಸದರಿ ಕೋರಿಕೆ ಪತ್ರವನ್ನು ಈಗಾಗಲೇ ನಿಪಿ-73 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-73(ಎ) ಎಂದು ಗುರುತಿಸಲಾಯಿತು. ದಿ.01-07-2021 ರಂದು ಚಾಸಾ-1 ಹಾಗೂ ಚಾಸಾ-10 ರಿಂದ 13 ರವರ ಕಲಂ.164 ರಡಿಯಲ್ಲಿ ಹೇಳಿಕೆಗಳನ್ನು ಪಡೆದುಕೊಳ್ಳಲು ಮಾನ್ಯ ನ್ಯಾಯಾಲಯಕ್ಕೆ ಕೋರಿಕೊಂಡಿರುತ್ತೇನೆ. ದಿ.08-07-2021 ರಂದು ಮಾನ್ಯ ನ್ಯಾಯಾಲಯದಿಂದ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿ.09-07-2021 ರಂದು ಚಾಸಾ-15 ರವರ ಹೇಳಿಕೆಯನ್ನು ಕಲಂ.164 ರಡಿಯಲ್ಲಿ ಪಡೆದುಕೊಳ್ಳಲು ಮಾನ್ಯ ನ್ಯಾಯಾಲಯಕ್ಕೆ ಕೋರಿಕೊಂಡಿರುತ್ತೇನೆ. ದಿ.16-07-2021 ರಂದು ಮಾನ್ಯ ನ್ಯಾಯಾಲಯದಿಂದ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಚಾಸಾ-1 ರವರ ಕಲಂ.164 ರಡಿಯಲ್ಲಿ ದಾಖಲಿಸಿದ ಹೇಳಿಕೆಯನ್ನು ನಿಪಿ-120 ಎಂದು, ಚಾಸಾ-10 ರವರ ಹೇಳಿಕೆಯನ್ನು ನಿಪಿ-121 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-120(ಎ) ಮತ್ತು 121(ಎ) ಎಂದು ಗುರುತಿಸಲಾಯಿತು. ಚಾಸಾ-11 ರವರ ಹೇಳಿಕೆಯನ್ನು ಈಗಾಗಲೇ ನಿಪಿ-53 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-53(ಬಿ) ಎಂದು ಗುರುತಿಸಲಾಯಿತು. ಚಾಸಾ-12 ರವರ ಹೇಳಿಕೆಯನ್ನು ನಿಪಿ-122 ಎಂದು, ಚಾಸಾ-13 ರವರ ಹೇಳಿಕೆಯನ್ನು ನಿಪಿ-123 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-122(ಎ) ಮತ್ತು 123(ಎ) ಎಂದು ಗುರುತಿಸಲಾಯಿತು. ಚಾಸಾ-15 ರವರ ಹೇಳಿಕೆಯನ್ನು ಈಗಾಗಲೇ ನಿಪಿ-27 ಎಂದು

ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-27(ಬಿ) ಎಂದು ಗುರುತಿಸಲಾಯಿತು.

20. ದಿ.12-07-2021 ರಂದು ಚಾಸಾ-35, 36 ಮತ್ತು 37 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ.13-07-2021 ರಂದು ಚಾಸಾ-29 ರವರಿಗೆ ಜ್ಞಾಪನವನ್ನು ನೀಡಿ, ಆರೋಪಿಯ ವಿರುದ್ಧ ಈ ಹಿಂದೆ ಹೊನ್ನಾವರ ಠಾಣೆಯಲ್ಲಿ ದಾಖಲಾಗಿದ್ದ ಗುನ್ನಾ ನಂ.119/2021 ರ ದೂರು ಮತ್ತು ಪ್ರ.ವ. ವರದಿಯನ್ನು ಹಾಜರುಪಡಿಸುವಂತೆ ಜ್ಞಾಪನ ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ ಜ್ಞಾಪನವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-112 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-112(ಬಿ) ಎಂದು ಗುರುತಿಸಲಾಯಿತು. ದಿ.15-02-2021 ರಂದು ಚಾಸಾ-27 ರವರಿಗೆ ಪತ್ರ ಬರೆದು, ಮೃತನಿಗೆ ಆದ ಗಾಯವು ಜಪ್ತಾದ ಚಾಕುವಿನಿಂದ ಆಗಿರುತ್ತದೆಯಾ ಎಂಬ ಬಗ್ಗೆ ಅಭಿಪ್ರಾಯ ನೀಡುವಂತೆ ಕೋರಿಕೊಂಡಿರುತ್ತೇನೆ ಹಾಗೂ ಅದರೊಂದಿಗೆ ಆರ್.ಎಫ್.ಎಸ್.ಎಲ್., ಮಂಗಳೂರು ರವರಿಂದ ಬಂದ ಚಾಕುವನ್ನು ಸಿಬ್ಬಂದಿಯೊಂದಿಗೆ ಕಳುಹಿಸಿಕೊಟ್ಟಿರುತ್ತೇನೆ. ಕೋರಿಕೆ ಪತ್ರವನ್ನು ಈಗಾಗಲೇ ನಿಪಿ-79 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-79(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-27 ರವರು ಮೃತನಿಗೆ ಆದ ಗಾಯವು ಜಪ್ತಾದ ಚಾಕುವಿನಿಂದ ಆಗಿರುವ ಸಾಧ್ಯತೆ ಇದೆ ಎಂದು ಅಭಿಪ್ರಾಯ ವರದಿಯನ್ನು ನೀಡಿದ್ದು, ಅದನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಹಾಗೂ ಚಾಕುವನ್ನು ಸೀಲು ಮಾಡಿ, ಮಾಹರಿನೊಂದಿಗೆ ನೀಡಿರುತ್ತಾರೆ. ಅಭಿಪ್ರಾಯ ವರದಿಯನ್ನು ಈಗಾಗಲೇ ನಿಪಿ-80 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-80(ಬಿ) ಎಂದು ಗುರುತಿಸಲಾಯಿತು. ಮಾದರಿ ಮೊಹರನ್ನು ಈಗಾಗಲೇ ನಿಪಿ-81 ಎಂದು ಗುರುತಿಸಲಾಗಿರುತ್ತದೆ.

21. ದಿ.17-07-2021 ರಂದು ಚಾಸಾ-29 ರವರು ಆರೋಪಿಯ ವಿರುದ್ಧ ಈ ಹಿಂದೆ ಹೊನ್ನಾವರ ಠಾಣೆಯಲ್ಲಿ ದಾಖಲಾಗಿದ್ದ ಗುನ್ನಾ ನಂ.119/2021 ರ ಪ್ರ.ವ. ವರದಿ ಹಾಗೂ ದೂರಿನ ದೃಢೀಕೃತ ಪ್ರತಿಯನ್ನು ಕವಚ ಪತ್ರದೊಂದಿಗೆ ನೀಡಿದ್ದು, ಅವುಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಪ್ರ.ವ. ವರದಿ ಹಾಗೂ ದೂರನ್ನು ಈಗಾಗಲೇ ನಿಪಿ-23 ಎಂದು, ಕವಚ ಪತ್ರವನ್ನು ನಿಪಿ-113 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-113(ಬಿ) ಎಂದು ಗುರುತಿಸಲಾಯಿತು. ದಿ.27-07-2021 ರಂದು ಚಾಸಾ-27 ರವರಿಗೆ ಪತ್ರ

ಬರೆದು, ಮೃತನ ಸಾವಿನ ಬಗ್ಗೆ ಅಭಿಪ್ರಾಯ ವರದಿಯನ್ನು ನೀಡುವಂತೆ ಕೋರಿಕೊಂಡಿರುತ್ತೇನೆ. ಅದರಂತೆ ಚಾಸಾ−27 ರವರು ನೀಡಿದ ಅಭಿಪ್ರಾಯ ವರದಿಯನ್ನು ಪಡೆದುಕೊಂಡಿದ್ದು, ಅದರಲ್ಲಿ ಮೃತನ ಮರಣವು ತೀವ್ರವಾದ, ಅತೀವ ರಕ್ತಸ್ರಾವದಿಂದ ಮತ್ತು ದೇಹದ ಪ್ರಾಮುಖ್ಯ ಅಂಗವಾದ ಹೃದಯಕ್ಕೆ ಹರಿತವಾದ, ಚೂಪಾದ ವಸ್ತುವಿನಿಂದ ಆದ ಗಾಯದಿಂದ ಆಗಿರುತ್ತದೆ ಎಂದು ವರದಿಯನ್ನು ನೀಡಿರುತ್ತಾರೆ. ಸಾಕ್ಷಿಯ ತಾನು ನೀಡಿದ ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ−82 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ−82(ಬಿ) ಎಂದು ಗುರುತಿಸಲಾಯಿತು. ಚಾಸಾ−27 ರವರು ನೀಡಿದ ಅಭಿಪ್ರಾಯ ವರದಿಯನ್ನು ಈಗಾಗಲೇ ನಿಪಿ−83 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ−83(ಬಿ) ಎಂದು ಗುರುತಿಸಲಾಯಿತು.

22. ಇಲ್ಲಿಯವರೆಗೆ ಆದ ತನಿಖೆಯಲ್ಲಿ ಆರೋಪಿಯ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡುಬಂದ ಕಾರಣ, ಆರ್.ಎಫ್.ಎಸ್.ಎಲ್ ವರದಿ, ಎಫ್.ಎಸ್.ಎಲ್. ವರದಿ, ಹೊನ್ನಾವರ ತಹಶೀಲ್ದಾರ್ ರವರಿಂದ ಪ್ರಕರಣಕ್ಕೆ ಸಂಬಂಧಿಸಿದ ಸ್ಥಳಗಳ ದಾಖಲೆಗಳು, ಲೊಕೋಪಯೋಗಿ ಇಲಾಖೆಯಿಂದ ಪ್ರಕರಣಕ್ಕೆ ಸಂಬಂಧಿಸಿದ ಸ್ಥಳಗಳ ನಕಾಶೆಗಳನ್ನು ಬಾಕಿ ಇರಿಸಿ, ದಿ.28−07−2021 ರಂದು ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

(ನ್ಯಾಯಾಲಯದ ಅವಧಿ ಮುಗಿದಿದ್ದರಿಂದ, ಮುಂದುವರೆದ ಮುಖ್ಯ ವಿಚಾರಣೆಗೆ ಹಾಗೂ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ